**ಕರ್ನಾಟಕ ಸರ್ಕಾರ**

ಸಂಖ್ಯೆ: ಇಡಿ 70 ಎಂಸಿಡಿ 2015

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:12.06.2015

**ಸುತ್ತೋಲೆ**

**ವಿಷಯ:** ಶ್ರೀ ಈಶ್ವರ್ ಪ್ರಸಾದ್, ಕಾರ್ಯದರ್ಶಿ ಇವರು ಮನುಕುಲ ರಕ್ಷಣೆಗೆ ಮಹತ್ವ ದಿನಗಳು ಎಂಬ ಸಚಿತ್ರ ಗ್ರಂಥ ಮತ್ತು ಪರಿಸರ ಕ್ಯಾಲೆಂಡರ್ ಹಾಗೂ ಪರಿಸರ ಸಾಕ್ಷ್ಯ ಚಿತ್ರ ತಯಾರಿಸಿರುವ ಬಗ್ಗೆ.

**ಉಲ್ಲೇಖ:** ಶ್ರೀ ಈಶ್ವರ್ ಪ್ರಸಾದ್, ಕಾರ್ಯದರ್ಶಿ ಪರಿಸರ ನಿಸರ್ಗ ಸಂರಕ್ಷಣಾ ಸಂಸ್ಥೆ ಬೆಂಗಳೂರು ಇವರ ಮನವಿ ದಿನಾಂಕ:26.03.2015.

***

ಶ್ರೀ ಈಶ್ವರ್ ಪ್ರಸಾದ್, ಕಾರ್ಯದರ್ಶಿ ಪರಿಸರ ನಿಸರ್ಗ ಸಂರಕ್ಷಣಾ ಸಂಸ್ಥೆ ಬೆಂಗಳೂರು, ಇವರು ಪರಿಸರ ಸಬಲೀಕರಣಕ್ಕೆ ಅರಿವು ಮೂಡಿಸಲು, ಸಹಕಾರಿಯಾಗುವ ಇವರು ಮನುಕುಲ ರಕ್ಷಣೆಗೆ ಮಹತ್ವ ದಿನಗಳು ಎಂಬ ಸಚಿತ್ರ ಗ್ರಂಥ ಮತ್ತು ಪರಿಸರ ಕ್ಯಾಲೆಂಡರ್ ಹಾಗೂ ಪರಿಸರ ಹೋಮ್ ಸಾಕ್ಷ್ಯ ಚಿತ್ರವನ್ನು ಕನ್ನಡಕ್ಕೆ ಅನುವಾದಿಸಿರುತ್ತಾರೆ ಬೋಧಕ ಸಿಬ್ಬಂದಿ, ವಿದ್ಯಾರ್ಥಿಗಳು ಹಾಗೂ ಅವರ ಪೋಷಕರಿಗೆ ಪರಿಸರ ಸಂರಕ್ಷಣೆ ಕುರಿತು ಅರಿವು ಮೂಡಿಸಲು ಉಪಯುಕ್ತವಾಗಿದೆ.

ಶಾಲಾ ಹಂತದಲ್ಲಿ ಡಿವಿಡಿಯನ್ನು ಬಳಸಿಕೊಂಡು ಶಿಕ್ಷಕರು ವಿದ್ಯಾರ್ಥಿಗಳು ಹಾಗೂ ಅವರ ಪೋಷಕರಿಗೆ ಪರಿಸರ ಸಂರಕ್ಷಣೆ ಕುರಿತು ಜಾಗೃತಿ ಮೂಡಿಸಲು ಸಹಾಯಕವಾಗಿದೆ. ಪರಿಸರ ಸಂಸ್ಥೆಯು ವಿಶ್ವ ಸಂಸ್ಥೆ ಹಾಗೂ ಭಾರತ ಸರ್ಕಾರಗಳು, ಪರಿಸರ ಸಬಲೀಕರಣಕ್ಕೆ ನಿಗಧಿಪಡಿಸಿರುವ ದಿನಗಳ ಕುರಿತು ಕನ್ನಡಿಗರಿಗೆ ಅರಿವು ಮೂಡಿಸಲು ಮನುಕುಲದ ರಕ್ಷಣೆಗೆ ಮಹತ್ವದ ದಿನಗಳು ಎಂಬ ಸಚಿತ್ರ ಗ್ರಂಥ ಮತ್ತು ಪರಿಸರ ಕ್ಯಾಲೆಂಡರ್ ಹಾಗೂ ಪರಿಸರ ಸಾಕ್ಷ್ಯ ಚಿತ್ರಗಳಾದ An Inconvinient Truth ನ್ನು 'ಒಂದು ನಿಷ್ಠುರ ಸತ್ಯ' ಎಂದು Home 'ಹೋಂ' ಎಂದು ಕನ್ನಡದಲ್ಲಿ ಸಿದ್ಧಪಡಿಸಿರುತ್ತಾರೆ. ಈ ಮೂರು ಪ್ರಜ್ಞಾ ಮೂಲಗಳ ಒಟ್ಟು ಬೆಲೆ ರೂ.750/-ಕ್ಕೆ ನಿಗಧಿಪಡಿಸಿದ್ದರೂ, ಶಾಲೆಗಳಿಗೆ ರೂ.600/-ಕ್ಕೆ ನೀಡಲು ಒಪ್ಪಿರುವುದರಿಂದ ಇದ್ದನ್ನು ಎಲ್ಲಾ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆ ಹಾಗೂ ಅನುದಾನಿತ ಶಾಲೆ/ಕಾಲೇಜುಗಳ ಮುಖ್ಯಸ್ಥರು ಚಾಲ್ತಿ/ಸಂಚಿತ ನಿಧಿಯಿಂದ ಖರೀದಿಸಲು ಜವಾಬ್ದಾರಿಯೊಂದಿಗೆ ಜಿಲ್ಲಾ ಉಪನಿರ್ದೇಶಕರುಗಳಿಗೆ/ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಅನುಮತಿ ನೀಡಿದೆ.

( ಐ.ಫಿಫ್. ಮಾಗಿ )
ವಿಶೇಷಾಧಿಕಾರಿ ಹಾಗೂ ಪದನಿಮಿತ
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ಯೋಜನೆ)

**ಇವರಿಗೆ:**

1. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.

D:\YR\dg\2015\kan ltrs 2015.docx

ಕಿಮ್ಮನೆ ರತ್ನಾಕರ್
ಡಾ. ಚಂದ್ರಶೇಖರ ಕಂಬಾರ
ಹಂಪ ನಾಗರಾಜಯ್ಯ
ಚಿರಂಜೀವಿ ಸಿಂಗ್
ವಿಜಯ್ ಗೋರೆ
ಡಾ. ಜಿ ಎಲ್ ಶಂಕರ್
ನಾಗೇಶ ಹೆಗಡೆ
ಈಶ್ವರ್ ಪ್ರಸಾದ್

ಪರಿಸರ PARISARA

**ಪರಿಸರ-ನಿಸರ್ಗ ಸಂರಕ್ಷಣಾ ಸಂಸ್ಥೆ**
ಸ್ಫೂರ್ತಿವನ, ಸಿ.ಹೆ.ಎಫ್, ಬೆಂಗಳೂರು ಜಲಮಂಡಳಿ
18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು - 560055
9448077019, 080 23340881
www.parisara.in, parisara1989@gmail.com

# ಮನವಿ

ಮಾನ್ಯರೆ,

ಸುಮಾರು ಮುನ್ನೂರು ಕೋಟಿ ವರ್ಷಗಳ ಭೂಮಿಯ ಜೀವವಿಕಾಸ ಚರಿತ್ರೆಯಲ್ಲಿ, ನಾವು ಮನುಷ್ಯರು ಮಾತ್ರ ಬುದ್ಧಿವಂತ ಪ್ರಾಣಿಯಾಗಿ ವಿಕಾಸಗೊಂಡಿದ್ದೇವೆ. 100 ವರ್ಷಗಳಿಂದೀಚೆಗೆ ನಮ್ಮವರ ಸಂಖ್ಯೆಯನ್ನು ಆರು ಪಟ್ಟು ಹೆಚ್ಚಿಸಿಕೊಂಡ ನಾವು, ನಮ್ಮ ಸಾಧನ ಸಾಮರ್ಥ್ಯವನ್ನು ಸಾವಿರಾರು ಪಟ್ಟು ಹೆಚ್ಚಿಸಿಕೊಂಡಿದ್ದೇವೆ. ಪೆಟ್ರೋಶಕ್ತಿಯಿಂದಾಗಿ ಸಾವಿರ ಜನರ ತೋಳ್ಬಲ ಪ್ರತಿಯೊಬ್ಬನಿಗೂ ಬಂದಿದೆ. ಸಂಪರ್ಕ ತಂತ್ರಜ್ಞಾನದಿಂದಾಗಿ ನಮ್ಮ ಲಕ್ಷಾಂತರ ಮಿದುಳುಗಳು ಒಟ್ಟಾಗಿ ಕೆಲಸ ಮಾಡತೊಡಗಿವೆ. ಈ ಎಲ್ಲ ಬಲಗಳಿಂದ ಮಹಾನ್ ಶಕ್ತಿಯಾಗಿ ರೂಪುಗೊಂಡ ನಾವು, ನಮ್ಮನ್ನು ಸೃಷ್ಟಿಸಿದ ಭೂಮಿಯನ್ನು ಹಲವಾರು ಬಾರಿ ನಾಶ ಮಾಡಬಲ್ಲ ಅಸ್ತ್ರಗಳನ್ನು ತಯಾರಿಸಿಕೊಂಡು, ಶತ್ರುವಿಲ್ಲದ ಸಮರಕ್ಕೆ ಸನ್ನದ್ಧರಾಗಿದ್ದೇವೆ.

ಈಗ, ನಮ್ಮ ಪೃಥ್ವಿಯ ಜೀವ ಮಂಡಲ ಹೈರಾಣಾಗಿ, ತತ್ತರಿಸುತ್ತಿದೆ. ಹೊಸದೊಂದು ಜಾಗತಿಕ ಸಂಕಟದ ಲಕ್ಷಣಗಳು ಕಾಣತೊಡಗಿವೆ. ಈ ಸಂಕಟವನ್ನು ಗಂಭೀರವಾಗಿ ಪರಿಗಣಿಸಬೇಕೆಂದು ಕರೆ ನೀಡಿರುವ ವಿಶ್ವಸಂಸ್ಥೆಯು, ಇದಕ್ಕಾಗಿ ವರ್ಷದುದ್ದಕ್ಕೂ ನಾನಾ ಪರಿಸರ ದಿನಗಳ ಆಚರಣೆಗಳನ್ನು ನಿಗದಿಗೊಳಿಸಿದೆ. ಭಾರತ ಸರಕಾರವೂ ಈ ದಿನಗಳಿಗೆ ಮಾನ್ಯತೆ ನೀಡಿ, ತಾನೂ ಒಂದೆರಡು ವಿಶೇಷ ಪರಿಸರ ದಿನಗಳನ್ನು ನಿಗದಿಗೊಳಿಸಿದೆ. ಆದರೆ ನಮ್ಮ ಶೈಕ್ಷಣಿಕ ಪಠ್ಯಗಳಲ್ಲಿ, ಬೋಧನಾ ವಿಧಾನಗಳಲ್ಲಿ, ಕ್ಯಾಲೆಂಡರ್, ಪಂಚಾಂಗಗಳಲ್ಲಿ ಇವುಗಳ ಪ್ರಸ್ತಾಪ ಇಲ್ಲವಾದ ಕಾರಣ ಈ ದಿನಗಳ, ದಿನಾಚರಣೆಗಳ ಪರಿಚಯ ನಮಗಿನ್ನೂ ಆಗಿಲ್ಲ.

ಭೂಮಿಯ ಜೀವಪರಂಪರೆ ನಿರಂತರ ಸಾಗಬೇಕು ಹಾಗೂ ಮನುಕುಲದ ನಾಳೆಗಳು ಸುಸ್ಥಿರವಾಗಲೆಂಬ ಉದ್ದೇಶದಿಂದ ಈ ಮಹತ್ತ್ವದ ಪರಿಸರ ದಿನಗಳ ಕುರಿತು ಕನ್ನಡಿಗರಿಗೆ ಅರಿವು ಮೂಡಿಸಲು, 'ಪರಿಸರ ಸಂಸ್ಥೆ'ಯು 'ಮನುಕುಲ ರಕ್ಷಣೆಗೆ ಮಹತ್ತ್ವದ ದಿನಗಳು' ಎಂಬ ಸಚಿತ್ರ ಗ್ರಂಥ, ಪರಿಸರ ಕ್ಯಾಲೆಂಡರ್ ಹಾಗೂ ಪರಿಸರ ಸಾಕ್ಷ್ಯಚಿತ್ರಗಳಾದ An Inconvenient Truthನ್ನು 'ಒಂದು ನಿಷ್ಠುರ ಸತ್ಯ' ಎಂದು ಮತ್ತು Homeನ್ನು 'ಹೋಂ' ಎಂದು ಕನ್ನಡದಲ್ಲಿ ಸಿದ್ಧಪಡಿಸಿದೆ. (ಮನುಕುಲ ರಕ್ಷಣೆಗೆ ಮಹತ್ತ್ವದ ದಿನಗಳು - ಸಚಿತ್ರ ಗ್ರಂಥ ಕುರಿತು, ಕರ್ನಾಟಕ ಸರಕಾರದ ಕನ್ನಡ ಪುಸ್ತಕ ಪ್ರಾಧಿಕಾರದ ಪುಸ್ತಕಲೋಕ ಹಾಗೂ ಪ್ರಜಾವಾಣಿ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ವಿಮರ್ಶಾ ಪ್ರತಿಗಳನ್ನು ಲಗತ್ತಿಸಿದೆ.)

ಪರಿಸರ ಸಬಲೀಕರಣಕ್ಕೆ ಸಮಗ್ರ ಮಾಹಿತಿ ನೀಡುವ ಈ ಪ್ರಜ್ಞಾಮೂಲಗಳು ಎಲ್ಲ ಶಾಲಾ ಕಾಲೇಜುಗಳಲ್ಲಿ, ಮನೆಗಳಲ್ಲಿ ಇರಬೇಕು. ಇದರಲ್ಲಿರುವ ಮಾಹಿತಿ ಎಲ್ಲರಿಗೆ, ವಿಶೇಷವಾಗಿ ಮಕ್ಕಳಿಗೆ, ಅವರ ಭವಿಷ್ಯ ರೂಪಿಸುವ ಬೋಧಕರ ಹಾಗೂ ಪೋಷಕರ ಮೂಲಕ ತಲುಪಬೇಕು. ಕೇವಲ ತಲುಪಿದರೆ ಸಾಲದು; ಪರಿಸರ ಸಂರಕ್ಷಣೆಯ ತತ್ತ್ವಗಳನ್ನು ಎಲ್ಲರೂ ರೂಢಿಸಿಕೊಳ್ಳಬೇಕು; ನಿತ್ಯ ಬದುಕಿನಲ್ಲಿ ಸ್ಥಾನ ನೀಡಬೇಕು; ಹಸಿರು ಸಂವರ್ಧನೆ, ಅಕ್ಷಯ ಶಕ್ತಿಮೂಲಗಳ ಬಳಕೆ, ಮಳೆ ನೀರಿನ ಸಂಗ್ರಹಣೆ, ನೈಸರ್ಗಿಕ ಸಂಪನ್ಮೂಲಗಳ ಹಿತ-ಮಿತ ಬಳಕೆ, ಮುಂತಾದ ನಮ್ಮ ಪರಂಪರೆಯಲ್ಲಿ ವಿಕಾಸವಾಗಿ ಬಂದಿದ್ದ ಸುಸ್ಥಿರ ಬದುಕಿನ ಚಟುವಟಿಕೆಗಳನ್ನು ಮರುಶೋಧ ಮಾಡಿ, ಮತ್ತೆ ಮತ್ತೆ ಆಚರಣೆಗೆ ತರಲು ಪ್ರೇರೇಪಿಸಬೇಕು.

ಈ ಸದುದ್ದೇಶದ ನಮ್ಮ ಮನವಿಗೆ ಸ್ಪಂದಿಸಿದ ಕರ್ನಾಟಕ ಸರಕಾರದ ಶಿಕ್ಷಣ ಇಲಾಖೆಯು, ಸಂಖ್ಯೆ: ಇಡಿ 70 ಎಂಸಿಡಿ 2015ರ ಸುತ್ತೋಲೆ ಮೂಲಕ 'ಪರಿಸರ' ಸಂಸ್ಥೆ ನಿರ್ಮಿಸಿರುವ ಪ್ರಜ್ಞಾಮೂಲಗಳನ್ನು ಶಾಲಾ/ಸಂಚಿತ ನಿಧಿಯಿಂದ ಖರೀದಿಸಲು, ರಾಜ್ಯದ ಎಲ್ಲಾ ಸರ್ಕಾರಿ ಹಾಗೂ ಅನುದಾನಿತ ಶಾಲಾ ಕಾಲೇಜುಗಳ ಮುಖ್ಯಸ್ಥರಿಗೆ, ಉಪನಿರ್ದೇಶಕರು/ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ ಅನುಮತಿ ನೀಡಿದೆ.

ಈ ಪ್ರಜ್ಞಾಮೂಲಗಳು ಆಗಾಗ ಬೋಧಕರ, ವಿದ್ಯಾರ್ಥಿಗಳ ಹಾಗೂ ಪೋಷಕರ ಕಣ್ಣಿಗೆ ಕಂಡಲ್ಲಿ, ಆ ಮಹತ್ತ್ವದ ದಿನಗಳಲ್ಲಿ ಭೂಮಿಯ ಯೋಗಕ್ಷೇಮ ಕುರಿತಂತೆ ಚಿಂತನೆ ಹಾಗೂ ಜೀವ ಮಂಡಲ ಸಂರಕ್ಷಣೆ, ಸಂವರ್ಧನೆಗೆ ಸಂಘಟಿತ ಪ್ರಯತ್ನ ನಡೆಯಲಿ ಎಂಬ ಆಶಯ ನಮ್ಮದು.

ಪರಿಸರ ಸಬಲೀಕರಣಕ್ಕೆ ವಿದ್ಯಾರ್ಥಿಗಳಿಗೆ ಮತ್ತವರ ಪೋಷಕರಿಗೆ, ಬದ್ಧತೆಯಿಂದ ಅರಿವು ಮೂಡಿಸುವ ಮೂಲಕ - ನಾಳಿನ ಪೀಳಿಗೆ ಹಾಗೂ ಮನುಕುಲದ ಒಟ್ಟಾರೆ ಕ್ಷೇಮಕ್ಕಾಗಿ ನಾವೆಲ್ಲ ಒಂದಾಗೋಣ ಬನ್ನಿ.

ತಮ್ಮ ವಿಶ್ವಾಸಿಗಳು:

ಕಿಮ್ಮನೆ ರತ್ನಾಕರ್ ಡಾ. ಚಂದ್ರಶೇಖರ ಕಂಬಾರ ಹಂಪ ನಾಗರಾಜಯ್ಯ ಡಾ. ಜಿ ಎಲ್ ಶಂಕರ್

ಚಿರಂಜೀವಿ ಸಿಂಗ್ ವಿಜಯ್ ಗೋರೆ ನಾಗೇಶ ಹೆಗಡೆ ಈಶ್ವರ್ ಪ್ರಸಾದ್